# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 874 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 23.02.2023 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಅಬಕಾರಿ ನಿಯಮ 1967ರ 5 ರನ್ವಯ ಬೀದರ್ ನಗರದ ಶಾಲಾ/ಕಾಲೇಜು/ದೇವಸ್ಥಾನದ 100 ಮೀಟರ್ ವ್ಯಾಪ್ತಿಯಲ್ಲಿ ಮದ್ಯದ ಅಂಗಡಿಗಳು ಇರುವುದು ಸರಿಯಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 11 ಪಿಇಎಸ್ 2015, ದಿನಾಂಕ:19.05.2017ರಲ್ಲಿ ಧಾರ್ಮಿಕ/ಶೈಕ್ಷಣಿಕ ಸಂಸ್ಥೆಗಳ/ಆಸ್ಪತ್ರೆಗಳ/ರಾಜ್ಯ ಅಥವಾ ಕೇಂದ್ರ ಸರ್ಕಾರಗಳ ಅಥವಾ ಸ್ಥಳೀಯ ಪ್ರಾಧಿಕಾರಗಳ 100 ಮೀ. ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸನ್ನದುಗಳಿಗೆ ಸಂಬಂಧಿಸಿದಂತೆ ದಿನಾಂಕ:01.07.2016ರ ಪೂರ್ವದಲ್ಲಿ ನವೀಕರಣಗೊಂಡು ಅದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಮದ್ಯ ಮಾರಾಟ ಸನ್ನದುಗಳಿಗೆ ನಿಯಮ 5ರ ಆಕ್ಷೇಪಣೆಗಳಿಂದ ವಿನಾಯಿತಿಯನ್ನು ನೀಡಲಾಗಿರುತ್ತದೆ.<br><br>ಬೀದರ್. ಜಿಲ್ಲೆಯಲ್ಲಿ ಪ್ರಸ್ತುತ 2022-23 ನೇ ಸಾಲಿಗೆ ಕಾರ್ಯನಿರ್ವಹಿಸುತ್ತಿರುವ ಮದ್ಯ ಮಾರಾಟ ಸನ್ನದುಗಳು ಅಧಿಸೂಚನೆ ಸಂಖ್ಯೆ: ಆಇ 11 ಪಿಇಎಸ್ 2015, ದಿನಾಂಕ:19.05.2017ರಲ್ಲಿ ನಿಯಮ 5 ರಡಿಯಲ್ಲಿ ನೀಡಿರುವ ವಿನಾಯಿತಿಯನ್ನು ಹೊರತುಪಡಿಸಿ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ನ್ನು ಉಲ್ಲಂಘಿಸಿ ಆಕ್ಷೇಪಣಾ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. |
| ಆ) | ಹಾಗಿದ್ದಲ್ಲಿ, ಗುರುನಾನಕ ಇಂಜಿನಿಯರಿಂಗ್ ಕಾಲೇಜ್ ಹಾಗೂ ಅಂಬೇಡ್ಕರ್ ಕಾಲೋನಿ, ಬ್ರಿಮ್ಸ್ ಕಾಲೇಜು (ಮಡಿವಾಳ ಚೌಕ್) ಹತ್ತಿರವಿರುವ ಮದ್ಯದ ಅಂಗಡಿಗಳು ಎಷ್ಟು ಮೀಟರ್ ದೂರದಲ್ಲಿವೆ; | ಬೀದರ್ ನಗರದ ಗುರುನಾನಕ್ ಇಂಜಿನಿಯರಿಂಗ್ ಕಾಲೇಜು, ಅಂಬೇಡ್ಕರ್ ಕಾಲೋನಿ ಮತ್ತು ಬ್ರಿಮ್ಸ್ ಕಾಲೇಜು (ಮಡಿವಾಳ ಚೌಕ್) |

ಹತ್ತಿರದಲ್ಲಿ 2022-23ನೇ ಸಾಲಿನಲ್ಲಿ 03 ಮದ್ಯ ಮಾರಾಟ ಸನ್ನದುಗಳು ಕಾರ್ಯನಿರ್ವಹಿಸುತ್ತಿದ್ದು, ಅಂಬೇಡ್ಕರ್ ಕಾಲೋನಿ ಹಾಗೂ ಕಾಲೇಜುಗಳಿಂದ ಇರುವ ಅಂತರಗಳ ವಿವರ ಕೆಳಕಂಡಂತಿದೆ.

| ಕ್ರ ಸಂ | ಸನ್ನದುದಾರರ ಹೆಸರು ಶ್ರೀ/ಶ್ರೀಮತಿ | ಸನ್ನದು ವಿಧ | ಕಾಲೇಜು / ಕಾಲೋನಿ ಹೆಸರು | ಸನ್ನದು ಕಾರ್ಯನಿರ್ವಹಿಸುತ್ತಿರುವ ಅಂತರ (ಮೀ.ಗಳಲ್ಲಿ) |
|---|---|---|---|---|
| 1 | ಸತ್ಯನಾರಯಣ ಬಚ್ಚಾ | ಸಿಎಲ್-2 | ಗುರುನಾನಕ್ ಇಂಜಿನಿಯರಿಂಗ್ ಕಾಲೇಜ್ | 206 ಮೀ. |
| 2 | ಶಿವರಾಜ್ ಕೆಂಚಾ | ಸಿಎಲ್-2 | ಅಂಬೇಡ್ಕರ್ ಕಾಲೋನಿ | 104 ಮೀ. |
| 3 | ಸಂಜಯ ಮಾಣಿಕಪ್ಪಾ ಖಾಶೆಂಪೂರ್ | ಸಿಎಲ್-2 | ಬ್ರಿಮ್ಸ್ ಕಾಲೇಜ್ (ಮಡಿವಾಳ ಚೌಕ್) | 68 ಮೀ. |

ಮೇಲಿನ ಕ್ರ.ಸಂ.3ರಲ್ಲಿರುವ ಶ್ರೀ ಸಂಜಯ ಮಾಣಿಕಪ್ಪಾ ಖಾಶೆಂಪೂರ್ ಇವರ ಸಿಎಲ್-2 ಸನ್ನದು ದಿನಾಂಕ:01.07.2016ರ ಪೂರ್ವದಲ್ಲಿ ನವೀಕರಣಗೊಂಡು ಅದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 11 ಪಿಇಎಸ್ 2015, ದಿನಾಂಕ:19.05.2017ರನ್ವಯ ನಿಯಮ 5ರ ಆಕ್ಷೇಪಣೆಗಳಿಂದ ವಿನಾಯಿತಿಯನ್ನು ಹೊಂದಿದೆ.

| | | |
|---|---|---|
| ಇ) | ಅಬಕಾರಿ ನಿಯಮ 1967ರ 5 ರನ್ವಯ ನಿಯಮ ಉಲ್ಲಂಘನೆ ಮಾಡುತ್ತಿರುವವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣವೇನು; | ಬೀದರ್ ಜಿಲ್ಲೆಯಲ್ಲಿ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ಅನ್ನು ಉಲ್ಲಂಘಿಸಿ ಯಾವುದೇ ಮದ್ಯ ಮಾರಾಟ ಸನ್ನದುಗಳನ್ನು ಮಂಜೂರಾತಿ/ನವೀಕರಣ ಮಾಡಿರುವುದಿಲ್ಲ, ಯಾವುದೇ ನಿಯಮಗಳ ಉಲ್ಲಂಘನೆ ಆಗದಿರುವ ಹಿನ್ನಲೆಯಲ್ಲಿ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ) | ಇಂತಹ ಅನೇಕ ಅಂಗಡಿಗಳು ನಿಯಮದ ವಿರುದ್ಧ | |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 22/02/2023 03:03 PM

| | | |
|---|---|---|
| | ನಡೆಯಲು ಇಲಾಖೆಯು ಬೆಂಬಲ ನೀಡುತ್ತಿದ್ದು, ಇಂತಹ ಇಲಾಖೆಯ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳುವುದು? | |

ಆಇ 19 ಇಎಲ್‌ಕ್ಯೂ 2023

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 22/02/2023 03:03 PM